Setting up of Rain-gauges in Gundlupet Taluk

* *Q.*—137. Smt. K. S. NAGARATHNAMMA (Gundlupet).— Will the Government be pleased to state:—

(*a*) the places in Gundlupet Taluk where Rain-gauges are set up;

(*b*) the rainfall in Begur and Terakanambi;

(*c*) whether the said Taluk has been considered as arid zone?

A.—Sri M. V. KRISHNAPPA (Mininister for Revenue).—

(*a*) 1. Gundlupet
2. Begur
3. Bandipura.

(*b*) There is no Rain-gauge station at Terakanambi. The Rainfall at Begur from 1-1-1963 to end of 20-12-1963 is as follows :

	M.M.
January 1963	Nil
February 1963	Nil
March 1963	10.7
April 1963	6.6
May 1963	71.6
June 1963	18.0
July 1963	Nil
August 1963	31.00
September 1963	38.1
October 1963	129.7
November 1963	9.4
December up to end of 20-12-1963	34.6
Total ...	349.7

(*c*) Yes.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ರೇನ್ ಗೇಜನ್ನು ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿಡ ಬೇಕೆಂಬ ನಿಯಮವನ್ನೇನಾದರೂ ಸರ್ಕಾರದವರು ಇಟ್ಟುಕೊಂಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಮಾನ್ಯವಾಗಿ ಅದು ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿರುತ್ತದೆ. ಈ ರೇನ್‌ಗೇಜ್ ಸ್ಟೇಷನ್ನು ನೋಡಿಕೊಳ್ಳುವುದಕ್ಕೆ ತಕ್ಕ ಅನುಕೂಲಗಳು ಇಲ್ಲದಿದ್ದರೆ ಕೆಲವುಸಂದರ್ಭಗಳಲ್ಲಿ ಅವು ಇರುವುದೇ ಇಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತೆರಕಣಾಂಬಿಯಲ್ಲಿ ಮಳೆ ಏನಾದರೂ ಬಂದರೆ ಅದರ ಲೆಕ್ಕ ಹೇಗೆ ಇಡುವುದು.

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೇ ತಾಲ್ಲೂಕಿನಲ್ಲಿ ಎಲ್ಲಿ Vast difference ಇರುತ್ತದೋ ಅಂತಹ ಕಡೆಗಳಲ್ಲಿ ಅಲ್ಲಿ ರೇಜ್ ಗೇಜನ್ನು ಹಾಕಿರುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಳೆಯ ಪ್ರಮಾಣವನ್ನು ಅಳತೆ ಮಾಡದೆಯೇ, ತೆರಕಣಾಂಬಿಯಲ್ಲಿ ಆ ಬಗ್ಗೆ ಯಾವ ರೀತಿ ಲೆಕ್ಕ ಇಟ್ಟಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತೆರಕಣಾಂಬಿಯಲ್ಲಿ ಮಳೆಯ ಮಾಪಕದ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಎಂದು ಈಗ ಪತ್ರ ವ್ಯವಹಾರ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾರ್ಚ್ ಮತ್ತು ಏಪ್ರೆಲ್ ತಿಂಗಳಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಕಾಲದಲ್ಲಿ ಸಾಕಷ್ಟು ಮಳೆ ಬಾರದಿರುವುದು, ಬೆಳೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಾಮರಾಜನಗರ, ಗುಂಡ್ಲುಪೇಟೆ ಕೊಳ್ಳೇಗಾಲ, ನಂಜನಗೂಡು ಮುಂತಾದ ಕೆಲವು ಭಾಗಗಳಲ್ಲಿ ಹೋದ ವರ್ಷ ಸರಿಯಾಗಿ ಮಳೆ ಕಡಮೆಯಾಗಿ ಬೆಳೆಗಳಿಗೆ ತುಂಬಾ ನಷ್ಟವಾಗಿದೆ ಎಂಬುದಾಗಿ ಈ ಮಾನ್ಯ ಸಭೆಯಲ್ಲಿ ಹಿಂದೆಯೇ ಉತ್ತರ ಕೊಟ್ಟಿದೆ. ಈಗಾಗಲೇ ಆ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಈ ತಾಲ್ಲೂಕು ಏರಿಡ್ ಪ್ರದೇಶವಾಗಿರುವುದರಿಂದ ಇಲ್ಲಿ ಕೆರೆ ಕಟ್ಟೆಗಳು ಬೇಕಾಗುತ್ತವೆ ಎಂದು ಪಿ. ಡಬ್ಲ್ಯೂಡಿಯವರು ವಿವರಗಳನ್ನು ಕೊಡುವುದಕ್ಕೆ ಸಾಧ್ಯವೆ?

ಶ್ರೀ ಎಂ. ವಿ. ಕೃಷ್ಣಪ್ಪ.— ಅದು ಈಗಾಗಲೇ ಅವರಿಗೆ ಗೊತ್ತಿದೆ.

Failure of Crops for want of Rains in Bhadravath Taluk.

*Q.—157 Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that crops have failed for want of rains in Bhadravathi taluk last year ;

(*b*) whether it is a fact that the ryots of this taluk have made representations for the remission of the land revenue ;

(*c*) whether they intend to give remission of land revenue ;

(*d*) if so, the number and names of villages in the taluk wherein the remission of land revenue would be granted together with the extent of land ?

A.—Sri M. V. KRISHNAPPA (Minister for Revenue).—

(*a*) Crops under the tank atchakat in Danavadi and Nagoli villages were partly affected for want of sufficient water in the tanks.

(*b*) Yes.

(*c*) and (*d*) The matter is being examined and further action for grant of remission wherever necessary will be taken as per rules.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸರ್ಕಾರದವರು ನನ್ನ (ಎ)ಪ್ರಶ್ನೆಗೆ ಉತ್ತರವಾಗಿ "ಕೆರೆಗಳಲ್ಲಿ ಸಾಕಷ್ಟು ನೀರಿಲ್ಲದಿದ್ದ ಕಾರಣ ನವರಿ ಕೆರೆಗಳ ಅಚ್ಚುಕಟ್ಟು ಪ್ರದೇಶಗಳಲ್ಲಿನ ಬೆಳೆಗಳಿಗೆ ಸ್ವಲ್ಪ ಮಟ್ಟಿಗೆ ನಷ್ಟವುಂಟಾಗಿದ್ದಿತು" ಎಂದು ಹೇಳಿದ್ದಾರೆ. ಅಂದ ಮೇಲೆ ಅದೇ ತಾಲ್ಲೂಕಿನ ಬೇರೆ ಗ್ರಾಮಗಳಲ್ಲಿರತಕ್ಕ ಕೆರೆಗಳಿಗೆ ನೀರು ಹೇಗೆ ಬಂತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿ ತಾಲ್ಲೂಕು ಒಳ್ಳೆ ಇರ್ರಿಗೇಷನ್ ಏರಿಯಾ ಎಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಭದ್ರಾ left ಮತ್ತು right ಬ್ಯಾಂಕ್ ನಾಲೆಗಳು ಬಂದಮೇಲೆ ಕೆರೆಗಳಿಗೆ ನೀರು ಬಾರದೆ ಇದ್ದರೂ ಭದ್ರಾ ಕೆರೆ ತುಂಬಿ overflow ಆಗಿ ಅಲ್ಲಿ ಬಹಳ ಮಟ್ಟಿಗೆ ಇರ್ರಿಗೇಷನ್ ಸಕ್ಸೆಸ್‌ಫುಲ್ಲಾಗಿ ನಡೆಯುತ್ತಿದೆ. ಮಳೆ ಅಷ್ಟೇನೂ failure ಆಗಿಲ್ಲ ಸ್ವಲ್ಪಮಟ್ಟಿಗೆ ಅಭಾವ ಪರಿಸ್ಥಿತಿ ಇದೆ. ಆದರೆ ಊರಿನ ಮುಂದೆ ಇರತಕ್ಕ ಕೆರೆಯೇನೋ ಸಾಕಷ್ಟು ತುಂಬಿದೆ. ಬೆಳೆಗಳಿಗೆ ಕೊಂಚಮಟ್ಟಿಗೆ ನಷ್ಟವುಂಟಾಗಿದೆ. ತಾಲ್ಲೂಕಿನ ಎರ್ಲಾ ಭಾಗದಲ್ಲೂ ಆ ರೀತಿಯೇನೋ ಇಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನೀರಿನ ಸೌಕರ್ಯ ಸಾಕಷ್ಟು ಇಲ್ಲದೆ ತಾಲ್ಲೂಕಿನ ಇನ್ನೂ ಕೆಲವು ಗ್ರಾಮಗಳಲ್ಲಿ ಬೆಳೆಗಳಿಗೆ ಬಹಳ ನಷ್ಟವಾಗುತ್ತಿರುವುದರಿಂದ ಚಾನಲ್ ಇಲ್ಲದಂತಹ ಯಾವ ಯಾವ ಗ್ರಾಮಗಳಲ್ಲಿ ಸರ್ಕಾರದವರು ಕಂದಾಯವನ್ನು ವಜಾಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?